**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಆರನೇ ಅಧಿವೇಶನ**

# ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–12)**

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (ಇ) ಖಂಡದಲ್ಲಿ, "ಅಂಟಿಕೊಳ್ಳುವ ಅಥವಾ ಮುದ್ರೆ ಹಾಕಲಾದ" ಎಂಬ ಪದಗಳ ತರುವಾಯ "ಅಥವಾ ಡಿಜಿಟಲ್ ಇ-ಸ್ಟ್ಯಾಂಪಿನ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (ಎಫ್) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಲಿಖಿತಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ "ಬರೆದುಕೊಟ್ಟದ್ದು" ಮತ್ತು "ಬರೆದುಕೊಡುವಿಕೆ" ಎಂದರೆ "ಸಹಿ ಮಾಡುವುದು" ಮತ್ತು "ಸಹಿ" ಹಾಗೂ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000ರ ಕೇಂದ್ರ ಅಧಿನಿಯಮ 21)ರಲ್ಲಿ ಪರಿಭಾಷಿಸಿದ ಅರ್ಥವ್ಯಾಪ್ತಿಯೊಳಗೆ "ವಿದ್ಯುನ್ಮಾನ ಸಹಿ"ಯನ್ನು ಸಹ ಒಳಗೊಳ್ಳತಕ್ಕದ್ದು." ; ಮತ್ತು

(iii) (ಹೆಚ್) ಖಂಡದಲ್ಲಿ,-

(ಎ) (i)ನೇ ಉಪ-ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಬಿ) (ii)ನೇ ಉಪ-ಖಂಡದಲ್ಲಿ "ನೀಡಿದ ಅಥವಾ ದೃಢೀಕರಿಸಿದ" ಎಂಬ ಪದಗಳ ತರುವಾಯ "ಮತ್ತು ಡಿಜಿಟಲ್ ಸಹಿಯೊಂದಿಗೆ ವಿದ್ಯುನ್ಮಾನವಾಗಿ ಸೃಜಿಸಲಾದ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. ಪ್ರಕರಣ 10ರ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿನ (3)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4) ಉಪ-ಪ್ರಕರಣ (1), (2) ಮತ್ತು (3)ರಡಿ ಮಾಡಲಾದ ನಿಯಮಗಳಿಗೊಳಪಟ್ಟು, ರಾಜ್ಯ ಸರ್ಕಾರವು ಈ ಕುರಿತು ಸರ್ಕಾರಿ ಖಜಾನೆಗೆ ವಿದ್ಯುನ್ಮಾನ ವಿಧಾನಗಳ ಮೂಲಕ ಸ್ಟ್ಯಾಂಪು ಸುಂಕದ ಪಾವತಿಗಾಗಿ ಮತ್ತು ಲಿಖಿತಕ್ಕಾಗಿನ ಸ್ಟ್ಯಾಂಪು ಸುಂಕದ ಅಂಥ ಪಾವತಿಯನ್ನು ಸೂಚಿಸುವುದಕ್ಕಾಗಿ ಕಾರ್ಯವಿಧಾನವನ್ನು ನಿಯಮಿಸಬಹುದು."

**4. 10ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ಎ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸ್ಟಾಂಪು ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 34)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ,-

(i) ಡಿಜಿಟಲ್ ಇ-ಸ್ಟಾಂಪಿಂಗ್‌ನ್ನು ಕ್ರಮಬದ್ಧ ಸ್ಟಾಂಪಿನ ಪರಿಧಿಯೊಳಗೆ ತರಲು;

(ii) ವಿದ್ಯುನ್ಮಾನ ಸಹಿಗಳಿಗೆ ಕಾನೂನಾತ್ಮಕ ಬೆಂಬಲವನ್ನು ನೀಡಲು; ಮತ್ತು

(iii) ವಿದ್ಯುನ್ಮಾನ ವಿಧಾನಗಳ ಮೂಲಕ ಸ್ಟಾಂಪು ಸುಂಕವನ್ನು ಸಾಧ್ಯವಾಗಿಸಲು

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚುವರಿ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

# ಅನುಬಂಧ
## ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ
## (1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

**Xxx xxx xxx**

**2. ಪರಿಭಾಷೆಗಳು.-**(1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

**Xxx xxx xxx**

(ಇ) ಲಿಖಿತಕ್ಕೆ ಅನ್ವಯವಾಗುವಂತೆ "ಕ್ರಮಬದ್ಧವಾಗಿ ಸ್ಟಾಂಪು ಹಚ್ಚಲಾದ'' ಎಂದರೆ, ಲಿಖಿತವು ಸರಿಯಾದ ಮೊಬಲಗಿಗಿಂತ ಕಡಿಮೆ ಇಲ್ಲದ ಅಂಟಿಕೊಳ್ಳುವ ಅಥವಾ ಮುದ್ರೆ ಹಾಕಲಾದ ಸ್ಟಾಂಪ್ ಒಂದಿರುವುದು ಮತ್ತು ಅಂಥ ಸ್ಟಾಂಪನ್ನು ಕರ್ನಾಟಕ ರಾಜ್ಯದ ರಾಜ್ಯ ಕ್ಷೇತ್ರಗಳಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗನುಸಾರವಾಗಿ ಅಂಟಿಸಲಾಗಿರುವುದು ಅಥವಾ ಉಪಯೋಗಿಸಿರುವುದು;

(ಎಫ್) ಲಿಖಿತಗಳಿಗೆ ಸಂಬಂಧಿಸಿದಂತೆ ಉಪಯೋಗಿಸುವ `ಬರೆದುಕೊಟ್ಟದ್ದು' ಮತ್ತು 'ಬರೆದುಕೊಡುವಿಕೆ ' ಎಂದರೆ, `ಸಹಿ ಮಾಡುವುದು' ಮತ್ತು `ಸಹಿ';

(ಜಿ) "ಸರ್ಕಾರಿ ಭದ್ರತೆ" ಎಂದರೆ, ಸಾರ್ವಜನಿಕ ಋಋಣ ಅಧಿನಿಯಮ, 1944(1944ರ ಕೇಂದ್ರ ಅಧಿನಿಯಮ ಸಂಖ್ಯೆXVIII)ರಲ್ಲಿ ಪರಿಭಾಷಿಸಿದಂತೆ ಸರ್ಕಾರಿ ಭದ್ರತೆ:

(ಹೆಚ್) ``ಮುದ್ರೆ ಹಾಕಲಾದ ಸ್ಟಾಂಪು '' ಎಂಬುದು,-

(i) ಫ್ರ್ಯಾಂಕಿಂಗ್ ಯಂತ್ರದಲ್ಲಿ ಮುದ್ರೆ ಹಾಕಲಾದುದು; ಮತ್ತು

(ii)ಕರ್ನಾಟಕ ರಾಜ್ಯದ ರಾಜ್ಯ ಕ್ಷೇತ್ರದಲ್ಲಿ, ಸಂದರ್ಭಾನುಸಾರ, ಜಿಲ್ಲಾಧಿಕಾರಿ ಅಥವಾ ಅಧಿಕೃತಗೊಳಿಸಲಾದ ಅಧಿಕಾರಿ ಅಥವಾ ಯುಕ್ತ ಅಧಿಕಾರಿಯು ನಿಯಮಿಸಬಹುದಾದಂತೆ ನೀಡಿದ ಅಥವಾ ದೃಢೀಕರಿಸಿದ ಪ್ರಮಾಣ ಪತ್ರ ಅಥವಾ ಹಿಂಬರಹವನ್ನು ಒಳಗೊಳ್ಳುತ್ತದೆ;

**Xxx xxx xxx**

**10. ಸುಂಕಗಳನ್ನುಹೇಗೆಸಂದಾಯಮಾಡತಕ್ಕದ್ದು:-**

**Xxx xxx xxx**

(3) (1)ನೇ ಉಪಪ್ರಕರಣದ (ಬಿ) ಖಂಡದ ಅಡಿಯಲ್ಲಿ ರಚಿಸಿದ ನಿಯಮಗಳಿಗೊಳಪಟ್ಟು, ಚೀಫ್ ಕಂಟ್ರೋಲಿಂಗ್ ರೆವಿನ್ಯೂ ಅಥಾರಿಟಿ ಅಥವಾ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಅಧಿಕಾರ ನೀಡಿದ ಯಾವೊಬ್ಬ ಇತರ ಅಧಿಕಾರಿಯು, ಲಿಖಿತದ ಮೇಲೆ, ಅಥವಾ ಸಂದರ್ಭಾನುಸಾರ, ಖಾಲಿ ಹಾಳೆಯ ಮೇಲೆ ಸ್ಟಾಂಪು ಸುಂಕದ ಸಂದಾಯವನ್ನು ಸೂಚಿಸುವ ಸ್ಟಾಂಪುಗಳ ಮುದ್ರೆ ಹಾಕುವುದಕ್ಕಾಗಿ ಯಂತ್ರವನ್ನು ಉಪಯೋಗಿಸುವುದು ಅಥವಾ ಗಣಕೀಕೃತ ಸ್ಟಾಂಪು ಸುಂಕ ನಿರ್ವಹಣಾ ವ್ಯವಸ್ಥೆಯನ್ನು ಅನುಷ್ಠಾನಗೊಳಿಸುವುದು ಅಥವಾ ವಿದ್ಯುನ್ಮಾನ ಸ್ಟಾಂಪಿಂಗ್ ಅಥವಾ ಸ್ಟಾಂಪಿಂಗ್‌ನ ಡಿಮೆಟಿರಿಯಲೈಸೇಷನ್ಮಾಡುವುದು, ಅಂಚೆ ಕಛೇರಿಗಳು ಹಾಗೂ ಬ್ಯಾಂಕುಗಳು ಸೇರಿದಂತೆ ಯಾವೊಬ್ಬ ವ್ಯಕ್ತಿ, ಯಾವುದೇ ನಿಕಾಯ ಅಥವಾ ಸಂಸ್ಥೆಯನ್ನು ಪ್ರಾಧಿಕರಿಸಬಹುದು.

**Xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500, 10ನೇ ಮಾರ್ಚ್ 2025

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SIXTH SESSION**

# THE KARNATAKA STAMP (AMENDMENT) BILL, 2025

**(LA Bill No. 12 of 2025)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the Seventy sixth year of the Republic of India as follows:-

**1. Short title and commencement.–** (1) This Act may be called the Karnataka Stamp (Amendment) Act, 2025.

(2) It shall come into force on such date as the State Government may, by notification in the Official Gazette, appoint.

**2. Amendment of section 2.-** In the Karnataka Stamp Act, 1957, (Karnataka Act 34 of 1957) (hereinafter referred to as the Principal Act), in section 2, in sub-section (1),-

(i) in clause (e), after the words “instrument bears impressed stamp” the words “or digital e-stamp”, shall be inserted;

(ii) for clause (f) the following shall be substituted, namely:-

“(f) “executed” and “execution”, used with reference to instruments, mean “signed” and “signature” and also includes electronic signature within the meaning as defined in the Information Technology Act, 2000 (Central Act 21 of 2000).”; and

(iii) in clause (h),-

(a) sub-clause (i) shall be omitted; and

(b) in sub-clause (ii), after the words “a certificate or endorsement” the words “generated electronically with digital signature and” shall be inserted.

**3. Amendment of section 10.-** In the Principal Act, in section 10, after sub-section (3), the following shall be inserted, namely:-

“(4) Subject to the rules made under sub-sections (1), (2) and (3), the State Government in this behalf, may prescribe the procedure for the payment of Stamp Duty by electronic means to the Government Treasury and for indicating such payment of Stamp Duty for the instrument.”

**4. Omission of section 10-A.-** In the Principal Act, section 10-A shall be omitted.

## STATEMENT OF OBJECTS AND REASONS

It is considered necessary to amend the Karnataka Stamp Act, 1957 (Karnataka Act 34 of 1957) to,-

(i) bring digital e-stamping within the ambit of duly stamped;

(ii) give legal support for electronic signatures; and

(iii) enable payment stamp duty by electronic means.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**KRISHNA BYREGOWDA**
Minister for Revenue

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA STAMP ACT, 1957**
**(KARNATAKA ACT 34 OF 1957)**

**XXX XXX XXX**

**2. Definitions.-** (1) In this Act, unless the context otherwise requires,—

**XXX XXX XXX**

(e) Duly stamped as applied to an instrument means that the instrument bears impressed stamp of not less than the proper amount and that such stamp has been impressed in accordance with law for the time being in force in the territories of the State of Karnataka.

(f) “executed”, and “execution”, used with reference to instruments, mean “signed” and “signature”;

(g) Government security means a Government security as defined in the Public Debt Act, 1944 (Central Act XVIII of 1944);

(h) Impressed stamp means;

(i) impression made with franking machine;

(ii) a certificate or endorsement made and attested as may be prescribed by the Deputy Commissioner or the authorised officer or the proper officer, as the case may be in the territories of the State of Karnataka.

**XXX XXX XXX**

**10. Duties how to be paid.- XXX XXX XXX**

**XXX XXX XXX**

(3) Subject to the rules made under clause (b) of sub-section (1), the Chief Controlling Revenue Authority or any other officer empowered by the State Government in this behalf may authorise any person, body or organisation, including Post Offices and Banks, to use machine for making impression of stamps or implement Computerised Stamp duty administration system or Electronic Stamping or Dematerialisation of stamping; for indicating the payment of stamp duty on any Instrument or plain paper, as the case may be

**XXX XXX XXX**

Govt. Press, Vikasa Soudha, Bengalur, 17th Mar, 2025, P7, W.D. , Copies 500